# ರಾಮಕೃಷ್ಣ ಸುದ್ದಿ ಸಂಚಯ

**ಶ್ರೀ ರಾಮಕೃಷ್ಣ ಕ್ರೆಡಿಟ್ ಕೋ-ಓಪರೇಟಿವ್ ಸೊಸೈಟಿ ಲಿ., ಮಂಗಳೂರು**

ಇದರ ಮುಖವಾಣಿ ತ್ರೈಮಾಸಿಕ ಸುದ್ದಿ ಪತ್ರಿಕೆ

ESTD : 1994

ವಿಳಾಸ : 2ನೇ ಮಹಡಿ, ಅಮೃತೋತ್ಸವ ಕಟ್ಟಡ, ಬಂಟ್ಸ್ ಹಾಸ್ಟೆಲ್ ಸರ್ಕಲ್, ಮಂಗಳೂರು-575 003.

Website : www.ramakrishnacredit.com    Email : ho@ramakrishnacredit.com

ಸಂಪುಟ : VI    ಸಂಚಿಕೆ : 4    ಎಲ್ಲರೂ ಒಬ್ಬನಿಗಾಗಿ, ಒಬ್ಬನು ಎಲ್ಲರಿಗಾಗಿ    ಜನವರಿ-ಮಾರ್ಚ್ 2021




## ಅಧ್ಯಕ್ಷರ ಮಾತು

### ಕೃತಜ್ಞತೆಗಳು

**2020-21ನೇ ವಿತ್ತೀಯ ಸಾಲಿನಲ್ಲಿ ಶ್ರೀ ರಾಮಕೃಷ್ಣ ಕ್ರೆಡಿಟ್ ಕೋ-ಓಪರೇಟಿವ್ ಸೊಸೈಟಿಯ ವ್ಯವಹಾರ ರೂ.130 ಕೋಟಿ (ಠೇವಣಿ ರೂ.73 ಕೋಟಿ + ಸಾಲ ರೂ.57 ಕೋಟಿ) ಹೆಚ್ಚಳದೊಂದಿಗೆ, ಶೇ.30ರ ಸಾರ್ವಕಾಲಿಕ ದಾಖಲೆಯ ವ್ಯವಹಾರಾಭಿವೃದ್ಧಿಯೊಂದಿಗೆ ಸಹಕಾರ ಕ್ಷೇತ್ರದಲ್ಲಿ ಅಪ್ರತಿಮ ಸಾಧನೆ**

**PHENOMINAL ACCOMPLISHMENT**

**ಶ್ರೀ ಕೆ. ಜೈರಾಜ್ ಬಿ. ರೈ**
**ಅಧ್ಯಕ್ಷರು**

2020-21 ಸಾಲಿನಲ್ಲಿ ಹಿಂದಿನ ವರ್ಷಗಳಂತೆ ಒಟ್ಟು ವ್ಯವಹಾರದಲ್ಲಿ ಸಾರ್ವಕಾಲಿಕ ಹೆಚ್ಚಳ ದಾಖಲಿಸಿಕೊಂಡು ಎಲ್ಲಾ ಕಾರ್ಯ ವಿಭಾಗದಲ್ಲಿ ನಿಗದಿತ ಗುರಿ ಮೀರಿದ ಸಾಧನೆ ಮಾಡಿ, ಅತ್ಯುತ್ತಮ ಪ್ರಗತಿ ಈ ವರ್ಷವೂ ಕಾಯ್ದುಕೊಂಡಿದೆ. 2020-21ನೇ ವಿತ್ತೀಯ ಸಾಲಿನ ಮೊದಲಾರ್ಧವರೆಗೆ ಕೋವಿಡ್-19ರ ಹಿಡುಗಿನ ಕಾರಣ ಸರ್ಕಾರವು ಘೋಷಿಸಿದ ಲಾಕ್‌ಡೌನ್‌ನ ಪರಿಣಾಮ ಆರ್ಥಿಕತೆ ಮಂದಗತಿಯಲ್ಲಿತ್ತು ಹಾಗೂ ಸಾಲಗಾರರಿಗೆ ಸಾಲ ಮರುಪಾವತಿಗೆ ಸರ್ಕಾರವು ನೀಡಿರುವ ಮೊರೋಟೋರಿಯಂ ಅವಧಿಯು ಕೂಡ ಜ್ಯಾರಿಯಲ್ಲಿತ್ತು. ಇಂತಹ ಕ್ಲಿಷ್ಟಕರ ಸಮಯ ಹಾಗೂ ಠೇವಣಿ ಸಂಗ್ರಹಣೆ ಮತ್ತು ಸಾಲ ವಿತರಣೆಯಲ್ಲಿ ಸಹಕಾರಿ ಕ್ಷೇತ್ರದಲ್ಲಿರುವ ತೀವ್ರ ಸ್ಪರ್ಧಾತ್ಮಕತೆಯ ನಡುವೆಯೂ ಸಂಘವು ತನ್ನ ಠೇವಣಿ ಸಂಗ್ರಹಣೆ ಮತ್ತು ಸಾಲ ವಿತರಣೆಯಲ್ಲಿ ಗಣನೀಯ ಹೆಚ್ಚಳ ಸಾಧಿಸಿಕೊಂಡು ಉತ್ತಮ ಪ್ರಗತಿ ದಾಖಲಿಸಿದೆ. ನಂತರದ ತ್ರೈಮಾಸಿಕ ಅವಧಿಯ 2020 ನವೆಂಬರ್ ತಿಂಗಳಲ್ಲಿ ಸಂಘವು 500 ಕೋಟಿ ರೂ.ಗಳ ಒಟ್ಟು ವ್ಯವಹಾರ ದಾಖಲಿಸಿತು. ಸ್ಥಾಪನೆಯ 26 ವರ್ಷಗಳ ಅವಧಿಯೊಳಗೆ 500 ಕೋಟಿ ಒಟ್ಟು ವ್ಯವಹಾರವನ್ನು ಮೀರಿದ ಸಾಧನೆ ಮಾಡಿದ ಅವಿಭಜಿತ ದಕ್ಷಿಣ ಕನ್ನಡ ಮತ್ತು ಉಡುಪಿ ಜಿಲ್ಲೆಯ ಪ್ರಥಮ ಸಹಕಾರ ಸಂಘವಾಗಿ ಮೂಡಿ ಬಂದಿದೆ. 2020-21ರ ವರ್ಷಾಂತ್ಯದ ತಿಂಗಳುಗಳಲ್ಲಿ ಕೋವಿಡ್‌ನ ಮರುಕಳಿಸುವಿಕೆಯಿಂದ ಪುನಃ ಲಾಕ್‌ಡೌನ್ ಆಗುವುದೆಂಬ ಊಹಾಪೋಹ, ಚಿನ್ನಾಭರಣದ ಮಾರುಕಟ್ಟೆ ದರ ಕುಸಿತ, ಹೀಗೆ, ಇಡೀ ವರ್ಷದಲ್ಲಿ ಇದ್ದ ಎಲ್ಲಾ ಅನಿಶ್ಚಿತತೆಗಳ ನಡುವೆಯೂ, ಸಂಘವು ತನ್ನ ಎಲ್ಲಾ ಕಾರ್ಯವಿಭಾಗಗಳಲ್ಲಿ ಅತ್ಯುತ್ತಮ ಪ್ರಗತಿ ಹೊಂದಿ, ಒಟ್ಟು ವ್ಯವಹಾರದಲ್ಲಿ ರೂ.130 ಕೋಟಿಯ ಸಾರ್ವಕಾಲಿಕ ದಾಖಲೆಯೊಂದಿಗೆ ಶೇ.30 ವ್ಯವಹಾರ ಅಭಿವೃದ್ಧಿಯೊಂದಿಗೆ ನಿಗದಿತ ಮತ್ತು ಪರಿಷ್ಕೃತ ಗುರಿಗಳನ್ನು ಮೀರಿ ಸಾಧನೆ ಮಾಡಿದೆ.

**ಸಂಘವು 31.03.2021ಕ್ಕೆ ಸಾಧಿಸಿದ ಪ್ರಗತಿ ವಿವರದ ಪಕ್ಷಿನೋಟ ಈ ಕೆಳಗಿನಂತಿದೆ.**
**(ಅಂಕಿ ಅಂಶಗಳು ಲೆಕ್ಕಪರಿಶೋಧನೆಗೆ ಒಳಪಟ್ಟು)**

| ಕ್ರ. ಸಂ. | ಕಾರ್ಯ ವಿಭಾಗ | ಮಾರ್ಚ್ 2020ಕ್ಕೆ ಇದ್ದಂತೆ (ರೂ) | ಮಾರ್ಚ್ 2021ಕ್ಕೆ ಇದ್ದಂತೆ (ರೂ) | ಹೆಚ್ಚಳ (ರೂ) | ಶೇ. ವೃದ್ಧಿ |
|---|---|---|---|---|---|
| 1 | ಠೇವಣಾತಿಗಳು | ರೂ.236 ಕೋಟಿ | ರೂ.309 ಕೋಟಿ | ರೂ.73 ಕೋಟಿ | 31% |
| 2 | ಸಾಲ ಮತ್ತು ಮುಂಗಡ | ರೂ.195 ಕೋಟಿ | ರೂ.252 ಕೋಟಿ | ರೂ.57 ಕೋಟಿ | 29% |
| 3 | ಒಟ್ಟು ವ್ಯವಹಾರ | ರೂ.431 ಕೋಟಿ | ರೂ.561 ಕೋಟಿ | ರೂ.130 ಕೋಟಿ | 30% |
| 4 | ನಿವ್ವಳ ಲಾಭ | ರೂ.6.22 ಕೋಟಿ | ರೂ.7.33 ಕೋಟಿ | ರೂ.1.11 ಕೋಟಿ | 18% |
| 5 | ಅನುತ್ಪಾದಕ ಆಸ್ತಿ (Absolute) | ರೂ.16 ಲಕ್ಷ | ರೂ.14 ಲಕ್ಷ | - | - |
| | ಶೇಕಡಾವಾರು | 0.08% | 0.06% | - | - |
| 6 | ನಿವ್ವಳ ಅನುತ್ಪಾದಕ ಆಸ್ತಿ | 0% | 0% | - | - |

**31.03.2020ಕ್ಕೆ ಇದ್ದ ವ್ಯವಹಾರವನ್ನು 31.03.2021ರ ವ್ಯವಹಾರಕ್ಕೆ ಹೋಲಿಸಿದಾಗ**

1. ಠೇವಣಾತಿಯಲ್ಲಿ 73 ಕೋಟಿ ರೂ. ಹೆಚ್ಚಳ (ಶೇ.31 ವೃದ್ಧಿ)
2. ಸಾಲ ಮತ್ತು ಮುಂಗಡದಲ್ಲಿ 57 ಕೋಟಿ ರೂ. ಹೆಚ್ಚಳ (ಶೇ.29 ವೃದ್ಧಿ).
3. ಒಟ್ಟು ವ್ಯವಹಾರದಲ್ಲಿ 130 ರೂ. ಕೋಟಿ ವೃದ್ಧಿ. (ಶೇ.30 ವೃದ್ಧಿ) ಇದು ಸಾರ್ವಕಾಲಿಕ ದಾಖಲೆಯ ಹೆಚ್ಚಳ. ಹಿಂದಿನ ಸಾಲಿನಲ್ಲಿ ಒಟ್ಟು ವ್ಯವಹಾರವು ರೂ.78 ಕೋಟಿಯಷ್ಟು ವೃದ್ಧಿಯಾಗಿದೆ.
4. Gross NPA ರೂ.2 ಲಕ್ಷ ಕಡಿಮೆ (ಶೇ.0.02% ಕಡಿಮೆ).
5. ನಿವ್ವಳ ಅನುತ್ಪಾದಕ ಆಸ್ತಿ (Net NPA) 0%. ಕಳೆದ 14 ವರ್ಷಗಳಿಂದ ಸಂಘದ ನಿವ್ವಳ ಅನುತ್ಪಾದಕ ಆಸ್ತಿ ಶೂನ್ಯ ಪ್ರಮಾಣದಲ್ಲಿದೆ.
6. ನಿವ್ವಳ ಲಾಭದಲ್ಲಿ ರೂ.1.11 ಕೋಟಿ ಹೆಚ್ಚಳಗೊಂಡು (ಶೇ.18 ವೃದ್ಧಿ)

ಸಂಘವು 2020–21ನೇ ಸಾಲಿಗೆ ಸಾಮಾನ್ಯವಾಗಿ ನಿಗದಿಪಡಿಸಿದ ಠೇವಣಿ, ಸಾಲ ಮತ್ತು ಒಟ್ಟು ವ್ಯವಹಾರಗಳನ್ನು ವರ್ಷಾಂತ್ಯಕ್ಕೆ ಸಾಕಷ್ಟು ಮುಂಚಿತವಾಗಿ ಸಾಧಿಸಿದ ಹಿನ್ನೆಲೆಯಲ್ಲಿ, ಸಂಘದ Vision 2025ರಂತೆ ದಿನಾಂಕ 31.03.2025ಕ್ಕೆ ರೂ.1000 ಕೋಟಿ ಒಟ್ಟು ವ್ಯವಹಾರವನ್ನು ತಲುಪುವ ಗುರಿಗೆ ಪೂರಕವಾಗಿ, ಸಂಘವು ವರ್ಷಾಂತ್ಯ 31.03.2021ಕ್ಕೆ 550 ಕೋಟಿ ರೂ. ಒಟ್ಟು ವ್ಯವಹಾರವನ್ನು ಹೊಂದುವ ಪರಿಷ್ಕೃತ ಗುರಿಯನ್ನು ಹಾಕಿಕೊಂಡಿತು. ಈ ಪರಿಷ್ಕೃತ ಗುರಿಯನ್ನು ಯೋಜನಾಬದ್ಧವಾಗಿ ಸಾಧಿಸುವ ನಿಟ್ಟಿನಲ್ಲಿ ಆಡಳಿತ ಮಂಡಳಿಯ ನಿರ್ದೇಶಕರುಗಳ ಪ್ರೋತ್ಸಾಹ, ಶಾಖಾ ಸಲಹಾ ಸಮಿತಿ ಅಧ್ಯಕ್ಷರುಗಳು ಮತ್ತು ಸದಸ್ಯರ ಸಹಕಾರದೊಂದಿಗೆ, 2021ರ ಫೆಬ್ರವರಿಯಲ್ಲಿ ಸಿಬ್ಬಂದಿಗಳ ಸಭೆಗಳನ್ನು ನಡೆಸಿ, ಪರಿಷ್ಕೃತ ವ್ಯವಹಾರದ ಗುರಿಗಳನ್ನು ಸಂಘದ ಎಲ್ಲಾ ಸಿಬ್ಬಂದಿಗಳಿಗೆ ಮತ್ತು ಶಾಖೆಗಳಿಗೆ ನೀಡಲಾಗಿತ್ತು. ಇದಕ್ಕೆ ಉತ್ತಮವಾಗಿ ಸ್ಪಂದಿಸಿದ ಸಿಬ್ಬಂದಿಗಳು, ವ್ಯವಹಾರಾಭಿವೃದ್ಧಿಯಲ್ಲಿ ತಮ್ಮನ್ನು ಇನ್ನಷ್ಟು ತೊಡಗಿಸಿಕೊಂಡರು. ಅವರಿಗೆ ಸಂಘದ ಸದಸ್ಯ ಠೇವಣಿದಾರರು ಮತ್ತು ಸಾಲಗಾರ ಸದಸ್ಯರು ಈ ಸಂದರ್ಭದಲ್ಲಿ ನೀಡಿರುವ ಬೆಂಬಲದಿಂದ ಪರಿಷ್ಕೃತ ಗುರಿ ರೂ. 550 ಕೋಟಿ ಮೀರಿ ವರ್ಷಾಂತ್ಯ 31.03.2021ಕ್ಕೆ ಒಟ್ಟು ವ್ಯವಹಾರ ರೂ.561 ಕೋಟಿಯನ್ನು ಸಾಧಿಸಲಾಯಿತು. 2020–21ನೇ ಸಾಲಿನಲ್ಲಿ ಸಂಘದ ಈ ಅನನ್ಯ ಅತ್ಯುಜ್ವಲ ಸಾಧನೆಗೆ ಕಾರಣಕರ್ತರಾದ ಆಡಳಿತ ಮಂಡಳಿ ನಿರ್ದೇಶಕರು, ಶಾಖಾ ಸಲಹಾ ಸಮಿತಿ ಅಧ್ಯಕ್ಷರು ಹಾಗೂ ಸದಸ್ಯರುಗಳಿಗೆ ಮತ್ತು ಎಲ್ಲಾ ಸಿಬ್ಬಂದಿಗಳಿಗೆ ಹಾಗೂ ಸಂಘದ ಎಲ್ಲಾ ಸದಸ್ಯ ಬಾಂಧವರಿಗೆ ವಿಶೇಷ ಅಭಿನಂದನೆಗಳನ್ನು ಈ ಮೂಲಕ ತಿಳಿಸುತ್ತಿದ್ದೇನೆ.

**(ಕೆ. ಜೈರಾಜ್ ಬಿ. ರೈ)**
**ಅಧ್ಯಕ್ಷರು**

## ನವೀಕೃತ ಹವಾನಿಯಂತ್ರಿತ ಕುಂದಾಪುರ ಶಾಖೆಯ ಉದ್ಘಾಟನೆ




ಸಂಘದ ನವೀಕೃತ ಹವಾನಿಯಂತ್ರಿತ ಕುಂದಾಪುರ ಶಾಖೆಯ ಉದ್ಘಾಟನೆಯನ್ನು ದಿನಾಂಕ 08.02.2021ರಂದು ಜರಗಿಸಲಾಯಿತು. ಸಂಘದ ಅಧ್ಯಕ್ಷರಾದ ಕೆ. ಜೈರಾಜ್ ಬಿ. ರೈಯವರ ಅಧ್ಯಕ್ಷತೆಯಲ್ಲಿ, ಬೈಂದೂರು ವಿಧಾನಸಭಾ ಕ್ಷೇತ್ರದ ಶಾಸಕ ಬಿ.ಎಂ. ಸುಕುಮಾರ ಶೆಟ್ಟಿ ಉದ್ಘಾಟಿಸಿದರು. ಮುಖ್ಯ ಅತಿಥಿಗಳಾಗಿ ಕುಂದಾಪುರ ಪುರಸಭೆ ಅಧ್ಯಕ್ಷರಾದ ಶ್ರೀಮತಿ ವೀಣಾ ಭಾಸ್ಕರ್ ಮೆಂಡನ್, ಉಡುಪಿ ಜಿಲ್ಲೆ ಸಹಕಾರ ಸಂಘಗಳ ಪ್ರಭಾರ ಉಪನಿಬಂಧಕರಾದ ಪ್ರವೀಣ್ ಬಿ. ನಾಯಕ್, ದ.ಕ. ಜಿಲ್ಲಾ ಕೇಂದ್ರ ಬ್ಯಾಂಕ್‌ನ ನಿರ್ದೇಶಕರಾದ ಎಸ್. ರಾಜು ಪೂಜಾರಿ, ಕುಂದಾಪುರ ಉಪವಿಭಾಗದ ಸಹಕಾರ ಸಂಘಗಳ ಸಹಾಯಕ ನಿಬಂಧಕರಾದ ಅರುಣ್ ಕುಮಾರ ಎಸ್.ವಿ., ಬಂಟರ ಯಾನೆ ನಾಡವರ ಮಾತೃ ಸಂಘ ಮಂಗಳೂರು ಇದರ ಜಂಟಿ ಕಾರ್ಯದರ್ಶಿ ಸಂಪಿಗೆಡಿ ಸಂಜೀವ ಶೆಟ್ಟಿ, ಬಂಟರಯಾನೆ ನಾಡವರ ಮಾತೃ ಸಂಘ ಇದರ ಕುಂದಾಪುರ ತಾಲೂಕು ಸಮಿತಿ ಸಂಚಾಲಕ ಆವರ್ಸೆ ಸುಧಾಕರ ಶೆಟ್ಟಿ, ಕುಂದಾಪುರ ತಾಲೂಕು ಯುವ ಬಂಟರ ಸಂಘದ ಅಧ್ಯಕ್ಷ ಸುನಿಲ್ ಕುಮಾರ್ ಶೆಟ್ಟಿ ಹೇರಿಕುದ್ರು, ಸಂಘದ ನಿರ್ದೇಶಕರುಗಳಾದ ಪಿ.ಬಿ. ದಿವಾಕರ ರೈ ಮತ್ತು ರವೀಂದ್ರನಾಥ ಜಿ. ಹೆಗ್ಡೆ ಹಾಗೂ ಕುಂದಾಪುರ ಶಾಖಾ ಸಲಹಾ ಸಮಿತಿ ಅಧ್ಯಕ್ಷರೂ, ಶಾಖಾ ಉಸ್ತುವಾರಿ ನಿರ್ದೇಶಕರೂ ಆಗಿರುವ ಅರುಣ್ ಕುಮಾರ್ ಶೆಟ್ಟಿ, ಪ್ರಭಾರ ಮಹಾಪ್ರಬಂಧಕರಾದ ಗಣೇಶ್ ಜಿ.ಕೆ.ಯವರು, ಶಾಖಾಧಿಕಾರಿ ಧನಂಜಯ್ ಶೆಟ್ಟಿಗಾರ್ ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದರು.

## ಶ್ರದ್ಧಾಂಜಲಿ

**ಈ ಅವಧಿಯಲ್ಲಿ ದೈವಾಧೀನರಾದ,**

- **ಶ್ರೀ ಸುರೇಶ್ ಶೆಟ್ಟಿ, (ಶಾಖಾ ಸಲಹಾ ಸಮಿತಿ ಸದಸ್ಯರು, ವೆಲೆನ್ಸೀಯಾ ಶಾಖೆ)**
- **ಶ್ರೀ ಜಯಶೀಲ ಶೆಟ್ಟಿ (ಕಾರ್ಕಳ ಶಾಖೆಯ ಶಾಖಾಧಿಕಾರಿ ಶ್ರೀ ವಿರಾಜ್ ಶೆಟ್ಟಿಯವರ ತಂದೆ)**

**ಅಗಲಿದ ದಿವ್ಯ ಚೇತನಗಳಿಗೆ ಚಿರಶಾಂತಿ ಕೋರಿಕೊಂಡು, ಸಂಘದ ಪರವಾಗಿ ಭಾವಪೂರ್ಣ ಶ್ರದ್ಧಾಂಜಲಿಯನ್ನು ಅರ್ಪಿಸುತ್ತೇವೆ.**

# ಅಭಿನಂದನೆಗಳು



ಕರ್ನಾಟಕ ರಾಜ್ಯ, ಸಹಕಾರ ಸಂಘಗಳ ನಿಬಂಧಕರಾದ ಶ್ರೀ ಎಸ್. ಜಿಯಾವುಲ್ಲ IAS ರವರು ಮಂಗಳೂರಿಗೆ ಭೇಟಿ ನೀಡಿದ ಸಂದರ್ಭದಲ್ಲಿ, ದ.ಕ.ಜಿ. ಕೇ.ಸ. ಬ್ಯಾಂಕಿನ ಅಧ್ಯಕ್ಷರಾದ ಡಾ। ಎಂ.ಎನ್. ರಾಜೇಂದ್ರ ಕುಮಾರ್ ಮತ್ತು ಸಹಕಾರ ಸಂಘಗಳ ಅಪರ ನಿಬಂಧಕರಾದ ಶ್ರೀ ಸಿ.ಎಂ. ದೇವರಾಜ್, ಕೆಸಿಎಸ್ ರವರ ಉಪಸ್ಥಿತಿಯಲ್ಲಿ ಸಂಘದ ಅಧ್ಯಕ್ಷರಾದ ಶ್ರೀ ಕೆ. ಜೈರಾಜ್ ಬಿ. ರೈಯವರು ಹೂಗುಚ್ಛ ನೀಡಿ ಅಭಿನಂದಿಸಿದರು.

## ಉಡುಪಿ, ಪುತ್ತೂರು ಮತ್ತು ಮಂಗಳೂರು ಕೇಂದ್ರಗಳಲ್ಲಿ ಜರಗಿದ ಸಿಬ್ಬಂದಿ ಸಭೆ







ಸಂಘದ ಪರಿಷ್ಕೃತ ಗುರಿ ಸಾಧನೆಯ ನಿಟ್ಟಿನಲ್ಲಿ, 2021ರ ಫೆಬ್ರವರಿ ತಿಂಗಳಲ್ಲಿ ಉಡುಪಿ, ಪುತ್ತೂರು ಮತ್ತು ಮಂಗಳೂರು ಕೇಂದ್ರವಾಗಿ ಸಂಘದ ಸಿಬ್ಬಂದಿಗಳ ಸಭೆಗಳನ್ನು ಅನುಕ್ರಮವಾಗಿ ದಿನಾಂಕ 13.02.2021, 20.02.2021 ಮತ್ತು 27.02.2021ರಂದು ಜರಗಿಸಲಾಯಿತು. ಸಂಘದ ಅಧ್ಯಕ್ಷರು ಈ ಸಭೆಗಳ ಅಧ್ಯಕ್ಷತೆಯನ್ನು ವಹಿಸಿದ್ದರು. ನಿರ್ದೇಶಕರುಗಳು ಈ ಸಭೆಗಳಲ್ಲಿ ಪಾಲ್ಗೊಂಡಿದ್ದರು

## ಶಾಖಾಧಿಕಾರಿ ಮತ್ತು ಸಿಬ್ಬಂದಿಗಳಿಗೆ ತರಬೇತಿ ಕಾರ್ಯಕ್ರಮ




ದಿನಾಂಕ 06.03.2021ರಂದು ಸಂಘದ ಕೇಂದ್ರ ಕಛೇರಿಯಲ್ಲಿ "Credit Appraisal and Stress Management" ಎಂಬ ವಿಷಯದ ಬಗ್ಗೆ ಜರಗಿದ ಶಾಖಾಧಿಕಾರಿಗಳ Training Programme.




ದಿನಾಂಕ 13.03.2021ರಂದು ಸಂಘದ ಕೇಂದ್ರ ಕಛೇರಿಯಲ್ಲಿ "Cyber Security" ಎಂಬ ವಿಷಯದ ಬಗ್ಗೆ ಜರಗಿದ ಸಿಬ್ಬಂದಿ Training Programmeನ ಉದ್ಘಾಟನೆ.

## ದಿನಾಂಕ 09.01.2021ರಂದು ಜರಗಿದ ಶಾಖಾ ವ್ಯವಸ್ಥಾಪಕರ ಸಭೆ



ದಿನಾಂಕ 09.01.2021ರಂದು ಜರಗಿದ ಶಾಖಾ ವ್ಯವಸ್ಥಾಪಕರ ಪ್ರಗತಿ ಪರಿಶೀಲನಾ ಸಭೆಯನ್ನು ಜರಗಿಸಲಾಯಿತು. ಸಭೆಯನ್ನು ಉದ್ಘಾಟಿಸಿದ ಸಂಘದ ಅಧ್ಯಕ್ಷರಾದ ಶ್ರೀ ಕೆ. ಜೈರಾಜ್ ಬಿ. ರೈಯವರು ವೈಯಕ್ತಿಕ ಶಾಖೆಗಳ ಪ್ರಗತಿ ಪರಿಶೀಲನೆ ನಡೆಸುವ ಸಂದರ್ಭದಲ್ಲಿ ಶಾಖೆಗಳು 2020-21ನೇ ಸಾಲಿನ ವರ್ಷಾಂತ್ಯ 31.03.2021ಕ್ಕೆ ಸಾಧಿಸಬೇಕಾದ ನಿಗದಿತ ಹಾಗೂ ಪರಿಷ್ಕೃತ ಗುರಿಗಳ ಬಗ್ಗೆ ತಿಳಿಸಿ, ಶಾಖಾಧಿಕಾರಿಗೆ ಸಲಹೆ ಸೂಚನೆ ಮಾರ್ಗದರ್ಶನಗಳನ್ನು ನೀಡಿ, ಗುರಿಗಳನ್ನು ತಪ್ಪದೇ ಸಾಧಿಸುವಂತೆ ಸೂಚಿಸಿದರು.

ನಿರ್ದೇಶಕರುಗಳಾದ ಶ್ರೀ ಯಂ. ರಾಮಯ ಶೆಟ್ಟಿ, ಶ್ರೀ ಪಿ.ಬಿ. ದಿವಾಕರ ರೈ ಮತ್ತು ಶ್ರೀ ಕುಂಬ್ರ ದಯಾಕರ ಆಳ್ವರವರು ಸಭೆಯಲ್ಲಿ ಭಾಗವಹಿಸಿ ಶಾಖಾಧಿಕಾರಿಗಳಿಗೆ ಸೂಕ್ತ ಸಲಹೆಗಳನ್ನು ನೀಡಿದರು.

# ಶಾಖೆಗಳಲ್ಲಿ ಹವಾನಿಯಂತ್ರಣ ವ್ಯವಸ್ಥೆಯ ಉದ್ಘಾಟನೆ ಮತ್ತು ಗ್ರಾಹಕರ ಸಂಪರ್ಕ ಸಭೆ



ದಿನಾಂಕ 16.02.2021ರಂದು ಸಂಘದ ಹಂಪನಕಟ್ಟೆ ಶಾಖೆಯ ಹವಾನಿಯಂತ್ರಣ ವ್ಯವಸ್ಥೆಯ ಉದ್ಘಾಟನೆ.



ದಿನಾಂಕ 23.02.2021ರಂದು ಜರಗಿದ ಸಂಘದ ಬಿ.ಸಿ.ರೋಡ್ ಶಾಖೆಯ ಗ್ರಾಹಕ ಸಂಪರ್ಕ ಸಭೆ.



ದಿನಾಂಕ 25.02.2021ರಂದು ಸಂಘದ ಉಪ್ಪಿನಂಗಡಿ ಶಾಖೆಯ ಹವಾನಿಯಂತ್ರಣ ವ್ಯವಸ್ಥೆಯ ಉದ್ಘಾಟನೆ.




ದಿನಾಂಕ 25.02.2021ರಂದು ಜರಗಿದ ಸಂಘದ ಕಡಬ ಶಾಖೆಯ ಹವಾ ನಿಯಂತ್ರಣ ವ್ಯವಸ್ಥೆ ಉದ್ಘಾಟನೆ.




ದಿನಾಂಕ 02.03.2021ರಂದು ಜರಗಿದ ಸಂಘದ ಮಂಗಳೂರು ಶಾಖೆಯ ಗ್ರಾಹಕ ಸಂಪರ್ಕ ಸಭೆ

## ಹುಟ್ಟು ಹಬ್ಬದ ಶುಭಾಶಯಗಳು

### ಸಿಬ್ಬಂದಿಗಳ ಹೆಸರು ಮತ್ತು ಶಾಖೆ

ಕು. ಅಶ್ವಿತಾ ಎಂ., ಕೇಂದ್ರ ಕಛೇರಿ
ಶ್ರೀಮತಿ ನಿರ್ಮಲ ಶೆಟ್ಟಿ, ಮೂಡಬಿದ್ರಿ
ಶ್ರೀಮತಿ ತುಳಸಿ, ಸುರತ್ಕಲ್
ಶ್ರೀಮತಿ ಅಕ್ಷತ ಕುಮಾರಿ, ಹಂಪನಕಟ್ಟೆ
ಕು. ಶ್ರುತಿ ಕೆ., ಬಿ.ಸಿ.ರೋಡ್
ಶ್ರೀ ಸೂರಜ್ ಭಂಡಾರಿ, ಸುರತ್ಕಲ್
ಶ್ರೀ ಬಾಲಕೃಷ್ಣ ರೈ, ವಿಟ್ಲ
ಶ್ರೀ ಶಮಿತ್‌ಕುಮಾರ್, ಮಂಗಳೂರು
ಶ್ರೀ ಮೋಹನ್‌ದಾಸ್ ಶೆಟ್ಟಿ, ಕೇಂದ್ರ ಕಛೇರಿ
ಶ್ರೀಮತಿ ಜ್ಯೋತಿ, ಕೇಂದ್ರ ಕಛೇರಿ
ಶ್ರೀ ಶ್ರೀಹರ್ಷ ಡಿಎಸ್., ಉಪ್ಪಿನಂಗಡಿ
ಶ್ರೀ ಅಮರ್‌ನಾಥ್ ಹೆಗ್ಡೆ, ಬ್ರಹ್ಮಾವರ
ಶ್ರೀಮತಿ ಮಿಸ್ರಿಯ ಪಿ.ಐ., ಉಪ್ಪಿನಂಗಡಿ
ಶ್ರೀಮತಿ ಜಯಂತಿ ಖಾರ್ವಿ, ಬೈಂದೂರು
ಶ್ರೀ ಭರತ್ ಎಸ್., ಕಾರ್ಕಳ
ಶ್ರೀಮತಿ ಅನಿತಾ ಎ., ಮುಲ್ಕಿ
ಶ್ರೀ ಕರುಣಾಕರ್ ಶೆಟ್ಟಿ, ಪುತ್ತೂರು
ಶ್ರೀಮತಿ ಲಾವಣ್ಯ, ಕುಂದಾಪುರ
ಶ್ರೀ ಗಣೇಶ್ ಜಿ.ಕೆ., ಕೇಂದ್ರ ಕಛೇರಿ
ಶ್ರೀಮತಿ ಶ್ರೀಲತಾ ಶೆಟ್ಟಿ, ಬೈಂದೂರು
ಶ್ರೀ ಸೇಸಪ್ಪ ನ್ಯಾಕ್, ಸುಳ್ಯ
ಶ್ರೀ ಕುಂಞ, ಬಿ.ಸಿ.ರೋಡ್
ಶ್ರೀ ಮಹಾಬಲ ಶೆಟ್ಟಿ, ಬಿ.ಸಿ.ರೋಡ್
ಶ್ರೀ ರಮೇಶ್ ಪಿ, ಸುಳ್ಯ
ಶ್ರೀಮತಿ ಉಷಾ ಬಿ., ಉಪ್ಪಿನಂಗಡಿ
ಶ್ರೀ ನವೀನ್‌ಕುಮಾರ್, ಮೂಡಬಿದ್ರಿ
ಶ್ರೀ ನಾಗರಾಜ್ ಎಚ್., ಬೈಂದೂರು
ಶ್ರೀಮತಿ ಉಷಾ ಶೆಟ್ಟಿ, ಕೇಂದ್ರ ಕಛೇರಿ
ಶ್ರೀ ಮೋಹನ್‌ದಾಸ್ ಶೆಟ್ಟಿ, ಮಂಗಳೂರು
ಶ್ರೀ ನಾಗರಾಜ್, ಕುಂದಾಪುರ
ಶ್ರೀ ಹರೀಶ್ ಮೂಲ್ಯ, ಬಿ.ಸಿ.ರೋಡ್
ಶ್ರೀ ರಾಘವೇಂದ್ರ ರಾವ್, ಹೆಬ್ರಿ

Private Circulation only

**BOOK-POST**

**To,**

If not delivered please return to :
**SRI RAMAKRISHNA CREDIT CO-OP. SOCIETY LTD.**
2nd Floor, Amruthotsava Building, Bunts Hostel Circle, Mangalore - 575 003.